ಕ್ರಮಗಳೇನು? ತಾಲ್ಲೂಕುವಾರು ವಿವರ ನೀಡುವುದು.

**ಶ್ರೀ ತಿಪ್ಪೆಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲಾಭವೃದ್ಧಿ ಸಚಿವರು):-** ಅಂತರ್ಜಲ ಸಮೀಕ್ಷಣೆ ಮತ್ತು ಅನ್ವೇಷಣಾ ವಿಭಾಗವು 1970-71ರ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಸ್ಥಾಪಸಲಾಗಿದ್ದು, ಕರ್ತವ್ಯ ನಿರ್ವಹಿಸುತ್ತಿರುವುದು. ಅಂದಿನಿಂದಲೂ, ಇಲಾಖೆಯು ವ್ಯವಸಾಯವನ್ನು ಅವಲಂಬಿಸಿಸುವ ರೈತರಿಗೆ ಕೃಷಿ ಅಭಿವೃದ್ಧಿ ಪಡಿಸುವ ಸಲುವಾಗಿ ಅಂತರ್ಜಲ ಹೊ/ದಲು ತೋಡು ಬಾವಿ: ಕೊಳವೆ ಬಾವಿಗಳನ್ನು ನಿರ್ಮಿಸಲು ಸ್ಥಳಾಯ್ಕೆಯ ತಾಂತ್ರಿಕ ಸಲಹಾ ಕಾರ್ಯಕ್ರಮವನ್ನು ಚಟುವಟಿಕೆಯಿಂದ ಮಾಡುತ್ತಿದೆ. ಇಲಾಖೆಯು ಅಂತರ್ಜಲ ಸಮೀಕ್ಷಣಾ ಕಾರ್ಯವನ್ನು ಎಲ್ಲಾ ತಾಲ್ಲೂಕುಗಳಲ್ಲಿ ಕೈಗೊಂಡಿದ್ದು ಅದರ ವರದಿಯನ್ನು ಅವಶ್ಯಕತೆ ಇದ್ದಾಗಲೆಲ್ಲಾ ಹೊರತರುತ್ತಿದೆ. ಇತ್ತೀಚೆಗೆ, ಅಂದರೆ 31-12-1994ರಂತೆ ಇಲಾಖೆಯು ರಾಜ್ಯದ ಅಂತರ್ಜಲ ಸ್ಥಿತಿಗಳ ಬಗ್ಗೆ ವರದಿ ಮಾಡಿದೆ. ಈ ಅಧ್ಯಯನದ ಪ್ರಕಾರ ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ಅಂತರ್ಜಲ ಬಳಕೆ ಅತಿಯಾಗಿರುವುದು ಕಂಡು ಬಂದಿದ್ದು ಅಂತರ್ಜಲದ ಮಟ್ಟ ತೀರ ಇಳಿಮುಖವಾಗಿದೆ. ಉಳಿದ ಎಂಟು ತಾಲ್ಲೂಕುಗಳಲ್ಲಿ ಅಂತರ್ಜಲ ಬಳಕೆಯು ಶೇಕಡ 32 ರಿಂದ 61 ರವರೆಗೂ ಇರುತ್ತದೆ. ಅಂತರ್ಜಲ ಮಟ್ಟ ಇಳಿಮುಖವಾಗಿರುವ ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ಸುಧಾರಿಸಲು ಕೃತಕ ಮರುಪೂರೈಕೆಯ ರಚನೆ ಗುರುತಿಸಿ ನಿರ್ಮಾಣದ ಕಾರ್ಯಕ್ರಮವನ್ನು ಕೆಗೊಳ್ಳಲಾಗಿದೆ.

**ವಿಷಯ:-** ಬೀಳಗಿ ತಾಲ್ಲೊಕಿನ ಲಿಂಗಾಪುರ ಏತ ನೀರಾವರಿ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:95(450)

ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆ ಬೀಳಗಿ ತಾಲ್ಲೂಕಿನ ಲಿಂಗಾಪುರ ಏತ ನೀರಾವರಿ ಯೋಜನೆ ಪ್ರಾರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಲ್ಲಿಯವರೆಗೆ ಈ ಯೋಜನೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ? ಈಗ ಈ ಯೋಜನೆಗಳು ಅಂದಾಜು ವೆಚ್ಚ ಎಷ್ಟಾಗಬಹುದು?

ಇ) ಹಾಗಿದ್ದಲ್ಲಿ ಯೋಜನೆಯನ್ನು ಯಾವಾಗ ಮುಗಿಸಲಾಗುವುದು?

**ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಸಚಿವರು):-** ಬಂದಿದೆ. ಇಲ್ಲಿಯವರೆಗೆ 0.41 ಲಕ್ಷ ರೂ.ಗಳು ಖರ್ಚಾಗಿದೆ. ಈಗ ಅದರ ಪರಿಷ್ಕೃತ ಅಂದಾಜು ವೆಚ್ಚ ರೂ. 129.336 ಲಕ್ಷ ಆಗಬಹುದು.

1996-97ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಶ್ರೀ ತಿಪ್ಪೇ ಸ್ವಾಮಿ,
(ಸಣ್ಣ ನೀರಾವರಿ ಮತ್ತು ಅಂತರ್ಜಲ ಸಚಿವರು)

**ವಿಷಯ:-** ಪೋಲಿಸ್ ಇಲಾಖೆಯ ಸಿಬ್ಬಂದಿ

ಚುಕ್ಕೆ ಗುರುತಿಲ್ಲ ಪ್ರಶ್ನೆ ಸಂಖ್ಯೆ 96(452)

**ಶ್ರೀ ಡಿ.ಆರ್.ಪಾಟೀಲ್ (ಗದಗ):-**

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರಾ

ಅ) ಕಳೆದ 5 ವರ್ಷಗಳ ಹಿಂದೆ ಪೋಲಿಸ್ ಇಲಾಖೆಯಲ್ಲಿ ಇದ್ದ ಒಟ್ಟು ಸಿಬ್ಬಂದಿ ಎಷ್ಟು?):- 49233( ದಿನಾಂಕ 31.12.91ರಲ್ಲಿದ್ದಂತೆ)

ಆ) ಅಂದು ಎಷ್ಟು ಜನ ಪಿಎಸ್ ಐ, ಸಿಪಿಐ, ಡಿವೈಎಸ್ ಪಿ, ಎಎಸ್ ಪಿ, ಎಸ್ ಪಿ, ಡಿಪಿಜಿ ಹಾಗೂ ಐಜಿ ಇದ್ದರು. ಹಾಗೂ 96 ಏಪ್ರಿಲ್ 1 ರಂದು ಈ ವರ್ಗದ ಎಷ್ಟು ಜನ ಅಧಿಕಾರಿಗಳಿದ್ದಾರೆ ಅಧಿಕಾರಿಗಳ ಸಂಖ್ಯೆಯಲ್ಲಿ ಆಗುವ ಹೆಚ್ಚಳದಿಂದ ರಾಜ್ಯದ ಬೊಕ್ಕಸಕ್ಕೆ ಎಷ್ಟು ಹಣಕಾಸಿನ ಹೊರೆ ಹೆಚ್ಚಿದೆ?:-

| ಹುದ್ದೆ | 1911 | 1.4.96 | ಹೆಚ್ಚುವರಿ |
|---|---|---|---|
| ಐಜಿಪಿ | 8 | 8 | - |
| ಡಿಐಜಿಪಿ | 20 | 24 | 4 |
| ಎಸ್ ಪಿ | 68 | 90 | 22 |
| ಅಡಿಷನಲ್ ಎಸ್ ಪಿ | 2 | 19 | 17 |
| ಡಿವೈಎಸ್ ಪಿ | 182 | 308 | 126 |
| ಸಿಪಿಐ | 705 | 1039 | 334 |
| ಪಿಎಸ್ ಐ | 2037 | 2321 | 284 |

ಹೆಚ್ಚಳ ಹುದ್ದೆಗಳಿಗೆ ಒಟ್ಟು ಮೊಹೆಯಾನ ರೂ. 56,79,063-00 ಹಾಗೂ ವಾರ್ಷಿಕ ರೂ. 6,81,48,756-00 ಗಳ ಹೆಚ್ಚಿನ ಹಣಕಾಸಿನ ಹೊರೆ ರಾಜ್ಯ ಬೊಕ್ಕಸದ ಮೇಲೆ ಬಿದ್ದಿದೆ.

ಶ್ರೀ ಜೆ.ಹೆಚ್.ಪಾಟೀಲ್
(ಮುಖ್ಯಮಂತ್ರಿಗಳು)

**ವಿಷಯ:-** ಮುಂಡರಗಿ ತಾಲ್ಲೂಕಿನ ಕಪ್ಪತಗುಡ್ಡದಲ್ಲಿ ಗಾಳಿಬಸಪನ ಗುಡಿ ಇರುವ ಗಾಳಿ ವೇಗದ ಬಗ್ಗೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :-97 (453)

**ಶ್ರೀ ಡಿ.ಆರ್.ಪಾಟೀಲ್ (ಗದಗ್):-**

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮುಂಡರಗಿ ತಾಲ್ಲೂಕಿನ ಕಪಿಪತ ಗುಡ್ಡದಲ್ಲಿ ಗಾಳಿಬಳಪ್ಪನ ಗುಡಿ ಹತ್ತಿರು ಇರುವ ಗಾಳಿ ವೇಗ ಎಷ್ಟು?:- ಮುಂಡರಗಿ ತಾಲ್ಲೂಕಿನ ಕಪ್ಪತ ಗುಡ್ಡದಲ್ಲಿ ಗಾಳಿ ಬಸಪ್ಪನ ಗುಡಿ ಹತ್ತಿರ ಇರುವ ಸರಾಸರಿ ಗಾಳಿ ವೇಗ ಒಂದು ಗಂಟೆಗೆ 28 ಕಿ.ಮೀಗಳು.

ಆ) ಈ ಪ್ರದೇಶದಲ್ಲಿ ವೇಗ ಗಾಳಿಯನ್ನು ಬಳಸಿ ಎಷ್ಟು ವಿದ್ಯುತ್ ಉತ್ಪಾದನೆ ಮಾಡಬಹುದು., ಇಲ್ಲಿಯವರೆಗೆ ಎಷ್ಟು ವಿದ್ಯುತ್ ಉತ್ಪಾದನೆ ಮಂಜೂರಾತಿ ನೀಡಲಾಗಿದೆ.? ಅವು ಯಾವ ಹಂತದಲ್ಲಿವೆ, ಪೂರ್ಣ ವಿವರ ನೀಡಬವುದು.:- ಈ ಪ್ರದೇಶದಲ್ಲಿ ಈ ವೇಗದ ಗಾಳಿಯನ್ನು ಬಳಸಿ ಸುಮಾರು 5 ಮೆ.ವಾ. ವಿದ್ಯುತ್ತ್ನು ಉತ್ಪಾದಿಸಬಹುದು. ಇದೇ ಶ್ರೇಣಿಯಲ್ಲಿ 30 ಕಿ.ಮೀ. ಉದ್ದದ ಪ್ರದೇಶದಲ್ಲಿ ಒಟ್ಟು 27 ಮೆ.ವಾ.ವಿದ್ಯುತ್ ಉತ್ಪಾದಿಸಬಹುದು ಎಂದು ಅಂದಾಜು ಮಾಡಲಾಗಿದೆ. ಈ 27 ಮೆ.ವಾ. ಪೈಕಿ ಕರ್ನಾಟಕ ವಿದ್ಯುತ್ ನಿಗಮವು 2 ಮೆ.ವಾ. ಸಾಮರ್ಥ್ಯಕ್ಕೆ